ಯಾರಾದ್ರೂ ನೋಡಿದ್ರೂ ನೋಡಿಕೊಳ್ಳಲಿ, ಸಾಯ್ಲಿ ಅತ್ಲಾಗೆ ಎಂದುಕೊಳ್ಳುತ್ತ, ಚೀಲದಿಂದ ಕರ್ಚೀಫ್ ತೆಗೆದು, ಮಡಿಕೆ ಮಾಡಿ, ಟ್ರಾಕ್ ಪ್ಯಾಂಟಿನ ಜಿಪ್ ತೆರೆದು, ಮೆತ್ತಗೆ ಅದನ್ನು ಒಳಉಡುಪಿನಲ್ಲಿ ತೂರಿಸಿದಳು. ಮತ್ತೊಮ್ಮೆ ನೀರು ಕುಡಿದಳು. ಕ್ಷಣಕ್ಷಣಕ್ಕೂ ಹೆಚ್ಚುತ್ತಿದ್ದ ಹೊಟ್ಟೆನೋವು. ಕಿಬ್ಬೊಟ್ಟೆಯಿಂದ ಶುರುವಾಗಿ ಹೊಟ್ಟೆಯನ್ನೆಲ್ಲ ಹಿಂಡುತ್ತ, ಇದೀಗ ಬೆನ್ನಿಗೂ ಹಬ್ಬುತ್ತಿದ್ದ ಅಸಾಧ್ಯ ನೋವು. ಇನ್ನು ಸಾಧ್ಯವೇ ಇಲ್ಲ ಎನ್ನಿಸಿ, ದಿಬ್ಬದ ಬಳಿ ಕೂತಳು. ಮೊಬೈಲ್ ತೆರೆದು ರಮೇಶನ ನಂಬರ್ ಒತ್ತಿದಳು. ಅತ್ತ ನಿದ್ದೆಗಣ್ಣಿನಲ್ಲಿದ್ದ ರಮೇಶ 'ಯಾಕೆ ಅಷ್ಟು ದೂರ್ ವಾಕಿಂಗ್ ಹೋಗಬೇಕಿತ್ತು' ಎಂದು ವಟಗುಡುತ್ತ ಎದ್ದ.

'ಬೇಗ ನನ್ನ ಹೊಟ್ಟೆನೋವಿನ ಮಾತ್ರೆ ತಗಂಡು ಬಾ. ಹಂಗೇ ಒಂದು ಪ್ಯಾಡು. ಸಾಯೋಹಂಗೆ ಆಗ್ತಿದೆ ಮಾರಾಯ' ವಿನುತಾಳ ಅಳುದನಿ ಕೇಳಿದಾಗ ಮಾತ್ರ ರಮೇಶನಿಗೆ ಎದೆ ನಡುಗಿತು. 'ಅಯ್ಯೋ, ಐದೇ ನಿಮಿಷದಲ್ಲಿ ಬರ್ತೀನಿ ಕಣೇ, ಸರಿಯಾಗಿ ಹೇಳು ಎಲ್ಲಿದ್ದೀಯ, ವಾಟ್ಸಾಪಿನಲ್ಲಿ ಲೊಕೇಶನ್ ಕಳಿಸು' ಎನ್ನುತ್ತ ಮಾತ್ರೆ ಡಬ್ಬಿಯಲ್ಲಿ ಹುಡುಕಿ ಅವಳು ಆಗೀಗ ತೆಗೆದುಕೊಳ್ಳುವ ಮಾತ್ರೆ ಎತ್ತಿಕೊಂಡ. ಅವಳ ವಾರ್ಡ್ರೋಬಿನಲ್ಲಿ ಮೂಲೆಯಲ್ಲಿದ್ದ ಪ್ಯಾಕೆಟ್ ಹುಡುಕಿ, ಒಂದು ಪ್ಯಾಡ್ ಎತ್ತಿಕೊಂಡು, ಅಲ್ಲೇ ಕಂಡ ಪ್ಲಾಸ್ಟಿಕ್ ಕವರಿಗೆ ಸೇರಿಸಿದ. ಚಿಕ್ಕ ಬಾಟಲಿಯಲ್ಲಿ ನೀರನ್ನೂ ಇಟ್ಟುಕೊಂಡ. ಮನೆಗೆ ಬೀಗ ಹಾಕಿ, ಸ್ಕೂಟರ್ ಹೊರತೆಗೆದ. ಅವಳು ಕಳಿಸಿದ್ದ ಲೊಕೇಶನ್ ಅನುಸರಿಸಿಕೊಂಡು ಬಂದ. ದಿಬ್ಬದ ಬಳಿ ಮಂಡಿಗಳ ನಡುವೆ ಮುಖವೂರಿ ಕುಳಿತ ವಿನುತಾ, ಪಕ್ಕದಲ್ಲಿ ಸ್ಟ್ಯಾಂಡ್ ಹಾಕಿದ್ದ ಸೈಕಲ್. ರಮೇಶ ಹೌಹಾರಿದ.



'ಏನೇ ಇದು. ನೀನ್ಯಾವಾಗ ಸೈಕಲ್ ಹೊಡೆಯಕ್ಕೆ ಶುರು ಮಾಡಿದೆ. ಒಂದ್ ಮಾತು ಹೇಳಕ್ಕೇನು ಧಾಡಿ. ಇಷ್ಟ್ ದೂರ ಯಾಕೆ ಒಬ್ಬಳೇ ಬರದು. ಏನಾದ್ರೂ ಹೆಚ್ಚುಕಡಿಮೆಯಾದ್ರೆ?'

'ಮೊದ್ಲು ಮಾತ್ರೆ ಕೊಡು, ಆಮೇಲೆ ನಿನ್ನ ಬೈಯೋ ಪುರಾಣ ಶುರು ಹಚ್ಚಿಕೋ'

ವಿನುತಾ ಮಾತ್ರೆ ನುಂಗಿದಳು. ಗಟಗಟನೆ ಇನ್ನಷ್ಟು ನೀರು ಕುಡಿದಳು. ಹೊಟ್ಟೆ ಹಿಡಿದುಕೊಂಡು ಮುಲುಗುಟ್ಟಿದಳು. ಮತ್ತೆ ಎದ್ದು ನಿಂತು, ಅವನು ತಂದಿದ್ದ ಪ್ಲಾಸ್ಟಿಕ್ ಕವರಿನಲ್ಲಿದ್ದ ಪ್ಯಾಡ್ ಹೊರತೆಗೆದಳು. ಸ್ವಲ್ಪ ಮರೆಯಾಗಿ ನಿಂತುಕೋ ಎಂದವಳೇ, ಒಳಉಡುಪಿನಿಂದ ಕರವಸ್ತ್ರದ ಮಡಿಕೆಯನ್ನು ಹೊರತೆಗೆದು, ಪ್ಯಾಡ್ ಒಳತೂರಿಸಿದಳು. ವಿನುತಾ ಕವರಿನೊಳಗೆ ಹಾಕುತ್ತಿದ್ದ ಕೆಂಪುಕೆಂಪಾಗಿದ್ದ ಕರವಸ್ತ್ರ. ಕೈಗೆ ನೀರು ಹಾಕು ಎಂದು ಅವನಿಂದ ನೀರು ಹಾಕಿಸಿಕೊಂಡು ಕೈತೊಳೆದಳು. ಆ ಕೆಂಪು ಕರವಸ್ತ್ರ. ಹಸೀರಕ್ತದ ವಾಸನೆ, ಕರವಸ್ತ್ರದ ಆ ಕೆಂಪು ರಮೇಶನನ್ನು ನಿಧಾನಕ್ಕೆ ಆವರಿಸುತ್ತ, ಸಿಟ್ಟೆಲ್ಲ ಇಳಿಯುತ್ತ, ಪಾಪ ಎನ್ನಿಸಲು ಶುರುವಾಗಿ, ಮಾತಾಡದೇ ಸ್ಕೂಟರಿನ ಸೀಟು ಹಿಡಿದು ನಿಂತ. 'ತುಂಬಾ ನೋಯ್ತಿದೆಯಾ?' ಕೂತಿದ್ದ ಅವಳ ತಲೆ ಸವರಿದ. ಮತ್ತೆ ಪಕ್ಕದಲ್ಲಿದ್ದ ಸೈಕಲ್ಲು ನೋಡಿದ. ಓ... ಹೊಸಾದು. ಈ ಸೈಕಲ್ ರಾಣಿ ನನಗೆ ಪರಿಚಯವೇ ಇರಲಿಲ್ಲವಲ್ಲ...ಇಷ್ಟು ದಿನ ಇವಳೆಲ್ಲಿದ್ದಳಪ್ಪ ಎಂಬಂತೆ ಬೆರಗಿನಿಂದ ಸೈಕಲ್ಲನ್ನೂ, ಹೊಟ್ಟೆ ಒತ್ತಿ ಹಿಡಿದು ಕೂತಿದ್ದ ವಿನುತಾಳನ್ನೂ ನೋಡಿದ. ಮಗಳಿಗಾದರೂ ಸೈಕಲ್ ಸವಾರಿಯ ವಿಷಯ ಹೇಳಿದ್ದಾಳೋ ಇಲ್ಲವೋ. ಮಹಾ ಗುಟ್ಟು ಇವಳದ್ದು.

ಸುಮಾರು ಅರ್ಧಗಂಟೆಯ ನಂತರ ವಿನುತಾಳಿಗೆ ನೋವು ಸ್ವಲ್ಪ ತಹಬಂದಿಗೆ ಬಂದಂತೆ ಅನ್ನಿಸಿತು. 'ನಾನು ನಿಧಾನ ಸೈಕಲ್ ಹೊಡ್ಕಂಡು ಬರ್ತೀನಿ. ನೀ ಮುಂದೆ ಹೋಗು' ಎಂದು ಮೇಲೆದ್ದಳು. ರಮೇಶ ಆಗೀಗ ತಿರುಗಿ ನೋಡುತ್ತ, ನಿಧಾನಕ್ಕೆ ಸ್ಕೂಟರ್ ಓಡಿಸಿದ. ಹ್ಯಾಗೆ ಪೆಡಲ್ ತುಳಿದಳೋ. ಹ್ಯಾಗೆ ಗೇಟ್ ತಲುಪಿದಳೋ. ಯಾವುದೋ ಟ್ರಾನ್ಸ್‌ನಲ್ಲಿ ಇದ್ದಂತೆ. ಮನೆಗೆ ಬಂದವಳೇ ಮೊದಲು ಬಚ್ಚಲು ಮನೆಗೆ